ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

"ಸೌಹಾರ್ದ ಸಹಕಾರಿ ಸೌಧ", 18ನೇ ಅಡ್ಡ ರಸ್ತೆ, ಮಾಗ್ಡೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055

www.souharda.coop, Ph: 080-23378375-80, E-mail: souharda@souharda.coop

ಸಂಖ್ಯೆ : ಸಂಸ/ಆವಿ/ಯಶಸ್ವಿನಿ–01/2022–23 ದಿನಾಂಕ: 03.11.2022

ಯಶಸ್ವಿನಿ ಯೋಜನೆ ಸುತ್ತೋಲೆ

ಇವರಿಗೆ :

ಮಾನ್ಯ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರು
ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು

ಮಾನ್ಯರೇ,

ವಿಷಯ : ಸೌಹಾರ್ದ ಸಹಕಾರಿಗಳ ಸದಸ್ಯರನ್ನು ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಗೆ ನೋಂದಾಯಿಸುವ ಬಗ್ಗೆ.

ಉಲ್ಲೇಖ : ಸರ್ಕಾರದ ಆದೇಶ ಸಂಖ್ಯೆ: ಸಿಒ 154 (1) ಸಿಎಲ್‌ಎಸ್ 2022, ದಿನಾಂಕ: 12.10.2022

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಸರ್ಕಾರವು ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಪರಿಷ್ಕರಿಸಿ ಸಹಕಾರ ಇಲಾಖೆಯ ಮೂಲಕ ಮರುಜಾರಿಗೊಳಿಸಿ ಅನುಷ್ಠಾನಗೊಳಿಸಲು ಉಲ್ಲೇಖದ ಮಾರ್ಗಸೂಚಿಯನ್ನು ಹೊರಡಿಸಿರುತ್ತದೆ. ಮಾರ್ಗಸೂಚಿಯನ್ವಯ ಯಶಸ್ವಿನಿ ಯೋಜನೆಯು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959, ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ಹಾಗೂ ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆ 2002ರಡಿ ನೋಂದಾಯಿಸಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ಸಹಕಾರ ಸಂಘದ ಸದಸ್ಯರು ಮತ್ತು ಅವರ ಕುಟುಂಬ ವರ್ಗದವರಿಗೆ ಅನ್ವಯಿಸುತ್ತದೆ.

ಯಶಸ್ವಿನಿ ಯೋಜನೆಯ ಅವಧಿ 01.01.2023 ರಿಂದ 31.12.2023 ರವರೆಗೆ ಜಾರಿಯಲ್ಲಿರುತ್ತದೆ. ಈ ಅವಧಿಯ ನೋಂದಣಿ ಪ್ರಕ್ರಿಯೆಯು ದಿನಾಂಕ:01.11.2022ರಿಂದ ಪ್ರಾರಂಭವಾಗಿದೆ. ಗ್ರಾಮೀಣ ಭಾಗದ ಸಹಕಾರಿ ಸಂಘದ/ಸೌಹಾರ್ದ ಸಹಕಾರಿಯ ಗರಿಷ್ಠ ನಾಲ್ಕು ಸದಸ್ಯರ ಕುಟುಂಬಕ್ಕೆ ವಾರ್ಷಿಕ ರೂ.500/– ಮತ್ತು ಕುಟುಂಬದಲ್ಲಿ ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರಿದ್ದಲ್ಲಿ ಪ್ರತೀ ಸದಸ್ಯನಿಗೆ ಹೆಚ್ಚುವರಿಯಾಗಿ ರೂ.100/– ವಂತಿಗೆ ಪಾವತಿಸಿ ನೋಂದಾಯಿಸಿಕೊಳ್ಳಬೇಕಾಗುತ್ತದೆ. ನಗರ ಸಹಕಾರ ಸಂಘಗಳ ಸದಸ್ಯರಿಗೆ ಸಂಬಂಧಿಸಿದಂತೆ ವಾರ್ಷಿಕ ವಂತಿಗೆ ರೂ.1000/– ಹಾಗೂ ನಾಲ್ಕಕ್ಕಿಂತ ಹೆಚ್ಚಿರುವ ಸದಸ್ಯನೊಬ್ಬನಿಗೆ ರೂ.200/– ವಂತಿಗೆ ನಿಗದಿಪಡಿಸಲಾಗಿದೆ.

ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಸದಸ್ಯರಿಗೆ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿ ಸಹಾಯಧನ ನೀಡುವ ಮೂಲಕ ಅವರ ವಾರ್ಷಿಕ ಸದಸ್ಯತ್ವದ ವಂತಿಗೆಯನ್ನು ಸರ್ಕಾರವೇ ಭರಿಸುವುದರಿಂದ ಸದರಿ ಸದಸ್ಯರು ವಂತಿಗೆ ಪಾವತಿಸುವ ಅಗತ್ಯವಿರುವುದಿಲ್ಲ. ಈ ಯೋಜನೆಯ ಸದಸ್ಯರಾಗಲು ವಯೋಮಿತಿಯ ನಿರ್ಬಂಧವಿರುವುದಿಲ್ಲ. ಸಹಕಾರ ಸಂಸ್ಥೆಯ ಸದಸ್ಯರಾಗಿ ಕನಿಷ್ಠ ಮೂರು ತಿಂಗಳಾಗಿರಬೇಕು. ಕುಟುಂಬದ ಒಬ್ಬ ವ್ಯಕ್ತಿ ಸಹಕಾರಿ ಸಂಸ್ಥೆಯ ಸದಸ್ಯನಾಗಿದ್ದಲ್ಲಿ ಅವನ ಕುಟುಂಬದ ಎಲ್ಲ ಸದಸ್ಯರನ್ನು ಈ ಯೋಜನೆಯಡಿಯಲ್ಲಿ ನೋಂದಾಯಿಸಬಹುದಾಗಿದೆ.

ಯಶಸ್ವಿನಿ ಯೋಜನೆಯಡಿ ನೋಂದಾಯಿಸಿದ ಸದಸ್ಯರಿಗೆ ಯೂನಿಕ್ ಐಡಿ ಸಂಖ್ಯೆಯುಳ್ಳ ಕಾರ್ಡ್‌ನ್ನು ಒದಗಿಸಲಾಗುತ್ತದೆ, ಸದರಿ ಕಾರ್ಡ್‌ನ್ನು ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಬಳಸಿ ಸದಸ್ಯರು ನಗದು ರಹಿತ ಚಿಕಿತ್ಸೆಯನ್ನು ಗರಿಷ್ಠ ಐದು ಲಕ್ಷ ರೂಪಾಯಿಗಳ ಮಿತಿಯಲ್ಲಿ ಪಡೆಯಬಹುದಾಗಿದೆ. ಪ್ರತೀ ಕುಟುಂಬದ ಒಂದು ಕಾರ್ಡಿಗೆ ರೂ.10/–ನ್ನು ಸಾದಿಲ್ವಾರು ವೆಚ್ಚವಾಗಿ ಸಹಕಾರಿಯು ಪಡೆಯಬಹುದಾಗಿದೆ. ಸದಸ್ಯರ ನೋಂದಣಿ ಮಾರ್ಗಸೂಚಿಗಳು, ನೆಟ್‌ವರ್ಕ್ ಆಸ್ಪತ್ರೆಗಳ ಪಟ್ಟಿ, ಶಸ್ತ್ರಚಿಕಿತ್ಸೆಗಳ ಪಟ್ಟಿ ಇವುಗಳ ಮಾಹಿತಿ ಸಹಕಾರ ಇಲಾಖೆಯ ಸಹಕಾರ ಸಿಂಧು ವೆಬ್‌ಸೈಟಿನಲ್ಲಿ (https://sahakarasindhu.karnataka.gov.in) ಅಪ್‌ಲೋಡ್ ಆಗಲಿದೆ, ಪ್ರಸ್ತುತ ಸರ್ಕಾರ ಹೊರಡಿಸಿರುವ ಮಾರ್ಗಸೂಚಿ ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ನಲ್ಲಿ ಲಭ್ಯವಿದೆ.

ಸೌಹಾರ್ದ ಸಹಕಾರಿ ಸಂಘಗಳು, ತಮ್ಮ ಸಹಕಾರಿಯ ಸದಸ್ಯರ ಕುಟುಂಬವನ್ನು ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಗೆ ನೋಂದಾಯಿಸಿ, ಈ ಯೋಜನೆಯ ಪ್ರಯೋಜನವನ್ನು ಸದಸ್ಯರಿಗೆ ಒದಗಿಸುವ ಮೂಲಕ ಯಶಸ್ವಿನಿ ಯೋಜನೆಯನ್ನು ಯಶಸ್ವಿಗೊಳಿಸಲು ಈ ಮೂಲಕ ತಿಳಿಸಿದೆ.

ವಂದನೆಗಳೊಂದಿಗೆ,

Karnataka State Souharda Federal Co-operative Reg. No. RSR/SOU/ACT/136/ Regn. 051/2001-02 Dated 04-01-2002 Bengaluru

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕರು